# NEWS CLIPPINGS

## 01-03-2026 TO 15-03-2026

*Udayavani 01-03-2026*

### ಶಕ್ತಿ ವಿದ್ಯಾಸಂಸ್ಥೆ, ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ,

# ವಿಜ್ಞಾನ ದೈನಂದಿನ ಬದುಕಿನ ಭಾಗ: ಖ್ಯಾತಿ ವರ್ಮಾ

**ಶಕ್ತಿನಗರ, ಫೆ. 28:** ಇಲ್ಲಿನ ಶಕ್ತಿ ವಿದ್ಯಾ ಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಟೆಕ್ ಮ್ಯಾಜಿಕ್ ರೇಷ್ಮಾ ಮೆಮೋರಿಯಲ್ ಆಡಿಟೋರಿಯಂನಲ್ಲಿ ಶನಿವಾರ ನಡೆಯಿತು.

ಮುಖ್ಯ ಅತಿಥಿ ಎನ್‌ಐಟಿಕೆ ಸುರತ್ಕಲ್ ಇಲ್ಲಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ| ಖ್ಯಾತಿ ವರ್ಮಾ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ವಿಜ್ಞಾನ ಕೇವಲ ಪಠ್ಯಪುಸ್ತಕದ ವಿಷಯವಲ್ಲ, ಅದೊಂದು ನಮ್ಮ ದೈನಂದಿನ ಬದುಕಿನ ಭಾಗವಾಗಿದೆ. ಅದೆಷ್ಟೋ ಸಾಧನೆಗಳನ್ನು ಮಾಡಿದ ವಿಜ್ಞಾನಿಗಳ ತಾಳ್ಮೆ ಮತ್ತು ಪರಿಶ್ರಮವನ್ನು ನಾವು ಈ ಸಂದರ್ಭದಲ್ಲಿ ನೆನಪಿಸಲೇಬೇಕಾಗಿದೆ. ಹಾಗಾಗಿ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳಿಂದಲೇ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಆಸಕ್ತಿಯನ್ನು ತಮ್ಮದಾಗಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಬಳಿಕ ವೇದಿಕೆಯಲ್ಲಿದ್ದ ಎಲ್ಲ ಗಣ್ಯರು ಮುಖ್ಯ ಅತಿಥಿಗಳಿಗೆ ಗೌರವಿಸಿದರು. ಸೈಂಟ್ ಅಲೋಶಿಯಸ್ ಎಂಜಿನಿಯರಿಂಗ್ ಕಾಲೇಜು ಮಂಗಳೂರು




ಇಲ್ಲಿನ ಸಹಾಯಕ ಡೀನ್ ಡಾ| ಗ್ಲೆನ್ಸನ್ ಟೋನಿ ಅವರು ಹೊಸತಾಗಿ ಅನ್ವೇಷಿಸಿದ ಬ್ಲೂಮರ್ಗ್ ಎಂಬ ಮೊಬೈಲ್ ಆ್ಯಪ್ ಬಗ್ಗೆ ಮಕ್ಕಳಿಗೆ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಕ್ತಿ ವಿದ್ಯಾ ಸಂಸ್ಥೆಯ ಆಡಳಿತ ಅಧಿಕಾರಿ ಡಾ| ಕೆ.ಸಿ. ನಾಯ್ಕ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಇದೊಂದು ಉತ್ತಮ ವೇದಿಕೆಯಾಗಿದೆ. ಶಕ್ತಿ ವಿದ್ಯಾಸಂಸ್ಥೆಯು ನಿರಂತರವಾಗಿ ಪ್ರೋತ್ಸಾಹವನ್ನು ವಿದ್ಯಾರ್ಥಿಗಳಿಗೆ ನೀಡಲು ಸಿದ್ಧವಿದೆ ಎಂದರು.

ಶಕ್ತಿ ವಿದ್ಯಾಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ್ ಕೆ., ಯೂಲೊ ಎಡ್ಯುಟೆಕ್ ಹಿರಿಯ ಶೈಕ್ಷಣಿಕ ವ್ಯವಸ್ಥಾಪಕ ಶ್ರವಣ್ ಶೆಟ್ಟಿ ಉಪಸ್ಥಿತರಿದ್ದರು. ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಹಾಗೂ ನಿಟ್ಟೆ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಶಕ್ತಿ ವಿದ್ಯಾ ಸಂಸ್ಥೆಗೆ ಆಗಮಿಸಿ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು. ಶಕ್ತಿ ರೆಸಿಡೆನ್ಷಿಯಲ್ ಶಾಲಾ ವಿದ್ಯಾರ್ಥಿಗಳಿಂದ ಎಐ ವಿಷಯಕ್ಕೆ ಸಂಬಂಧಿಸಿದ ಸುಮಾರು 15ಕ್ಕೂ ಹೆಚ್ಚಿನ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಮೈದಾನದಲ್ಲಿ ಏರ್‌ಶೋ ನಡೆಯಿತು. ಶಕ್ತಿ ವಸತಿ ಶಾಲೆಯ ಪ್ರಾಂಶುಪಾಲೆ ಬಬಿತಾ ಸೂರಜ್ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಶಕ್ತಿ ಶಾಲೆಯ ಶಿಕ್ಷಕಿ ಮಧುರಾ ನಿರೂಪಿಸಿದರು.

*Udayavani 01-03-2026*

# ಮಹತಿ ಪವನಾಸ್ಕರ್ ರಾಜ್ಯಕ್ಕೆ ಪ್ರಥಮ



**ಮಹಾನಗರ, ಫೆ. 28:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಅವರು ಆಯೋಜಿಸಿದ ರಾಜ್ಯ ಮಟ್ಟದ ಕಲಾಪ್ರತಿಭೋತ್ಸವ ಸ್ಪರ್ಧೆಯ ಯುವಪ್ರತಿಭೆ ವಿಭಾಗದಲ್ಲಿ ಮಹತಿ ಪವನಾಸ್ಕರ್ ಅವರು ಭರತನಾಟ್ಯದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಗಾನ ನೃತ್ಯ ಅಕಾಡೆಮಿಯ ನಿರ್ದೇಶಕಿ ವಿದ್ಯಾಶ್ರೀ ರಾಧಾಕೃಷ್ಣ ಶಿಷ್ಯೆಯಾದ ಅವರು ಸಂತ ಅಲೋಶಿಯಸ್ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಮಾಲಿನಿ ಹಾಗೂ ಹರೀಶ್ ಪವನಾಸ್ಕರ್ ಅವರ ಪುತ್ರಿ.

*Udayavani 01-03-2026*

# ಸಂಶೋಧನ ಸಂಸ್ಕೃತಿ ಬೆಳೆಯಲಿ: ಜಯಕರ ಭಂಡಾರಿ

**ಬಾವುಟಗುಡ್ಡೆ, ಫೆ.28:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ವಿಜ್ಞಾನದಲ್ಲಿ ಮಹಿಳೆಯರು-ವಿಕಾಸಿತ ಭಾರತವನ್ನು ವೇಗಗೊಳಿಸುವುದು ಎಂಬ ವಿಷಯದೊಂದಿಗೆ ರಾಷ್ಟ್ರೀಯ ವಿಜ್ಞಾನ ದಿನವನ್ನು ವಿಶ್ವವಿದ್ಯಾನಿಲಯದ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಆಯೋಜಿಸಿತು.

ಮಂಗಳೂರಿನ ಡಾ| ಪಿ. ದಯಾನಂದ ಪೈ - ಪಿ. ಸತೀಶ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ| ಜಯಕರ ಭಂಡಾರಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸಂಶೋಧನ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ವೈಜ್ಞಾನಿಕ ಕ್ಷೇತ್ರಗಳಲ್ಲಿ ಮಹಿಳೆಯರು ನಾಯಕತ್ವ ವಹಿಸಿಕೊಳ್ಳಲು ಮುಂದೆ ಬರಬೇಕು ಎಂದರು.

ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ರಾಸಾಯನಿಕ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ ಪ್ರೊ| ವಿದ್ಯಾ ಶೆಟ್ಟಿ ಗೌರವ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಸರ್ ಸಿ.ವಿ. ರಾಮನ್ ಅವರ ಸಂಶೋಧನೆಗಳನ್ನು ಸ್ಮರಿಸಿದರು.

ಅಲೋಶಿಯಸ್ ವಿವಿಯ ಕುಲಪತಿ ರೆ| ಡಾ| ಪ್ರವೀಣ್ ಮಾರ್ಟಿಸ್ ಕಾರ್ಯಕ್ರಮದ ಅಧ್ಯಕ್ಷತೆ



ವಹಿಸಿ ಮಾತನಾಡಿದರು.

ಅಲೋಶಿಯಸ್ ವಿವಿಯ ಸಹಕುಲಪತಿ ರೆ| ಡಾ| ಮೆಲ್ವಿನ್ ಡಿ.ಕುನ್ಹಾ, ವಿವಿಯ ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್, ಎಂಜಿನಿಯರಿಂಗ್ ಡೀನ್ ಡಾ| ರೂಬನ್ ಎಸ್., ಕ್ಸೇವಿಯರ್ ಬ್ಲಾಕ್‌ನ ನಿರ್ದೇಶಕಿ ಡಾ| ಅರುಣಾ ಕಲ್ಕುರ ಟಿ., ಎಲ್‌ಸಿಆರ್‌ಐ ಬ್ಲಾಕ್‌ನ ನಿರ್ದೇಶಕಿ ಡಾ| ಆಶಾ ಅಬ್ರಹಾಂ, ಕಾರ್ಯಕ್ರಮದ ಸಂಚಾಲಕಿ ಡಾ| ಜ್ಯೋತಿ ಮಿರಾಂಡಾ, ಸಹ ಸಂಚಾಲಕಿ ಡಾ| ಗೀತಾ ಪಿಂಟೊ, ಜೀವ ವಿಜ್ಞಾನದ ಡೀನ್ ಡಾ| ರೆನಿಟಾ ಮರಿಯಾ ಡಿ'ಸೋಜಾ ಉಪಸ್ಥಿತರಿದ್ದರು.

ಇತ್ತೀಚೆಗೆ ನಿಧನರಾದ ವಿಶ್ವಪ್ರಸಿದ್ಧ ವಿಜ್ಞಾನಿ ಮತ್ತು ಅಲೋಶಿಯಸ್ ಕಾಲೇಜಿನ ಮಾಜಿ ಪ್ರಾಂಶುಪಾಲ ದಿ| ರೆ| ಡಾ| ಲಿಯೋ ಡಿ'ಸೋಜಾ ಎಸ್.ಜೆ. ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಆಣ್ವಿಕ ಜೀವಶಾಸ್ತ್ರ ಪ್ರಯೋಗಾಲಯದ ಸಂಶೋಧನ ಸಂಯೋಜಕಿ ಡಾ| ಶಶಿಕಿರಣ್ ನಿವಾಸ್ ಅವರು ದಿ| ಡಾ| ಲಿಯೋ ಡಿ'ಸೋಜಾ ಎಸ್.ಜೆ. ಅವರ ಬಗ್ಗೆ ಮಾತನಾಡಿದರು

ಸಹಾಯಕ ಪ್ರಾಧ್ಯಾಪಕಿ ಅಕ್ಷಿತಾ ನಿರೂಪಿಸಿದರು. ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ| ಜ್ಯೋತಿ ಮಿರಾಂಡಾ ಸ್ವಾಗತಿಸಿದರು. ಸಹಾಯಕ ಡೀನ್ ಡಾ| ಗೀತಾ ಪಿಂಟೊ ವಂದಿಸಿದರು.

*Kannadaprabha 01-03-2026*

# ಅಲೋಶಿಯಸ್ ವಿ.ವಿ.: ರಾಷ್ಟ್ರೀಯ ವಿಜ್ಞಾನ ದಿನಾಚರಣೆ

## ಅಲೋಶಿಯಸ್ ಕಾಲೇಜಿನ ಮಾಜಿ ಪ್ರಾಂಶುಪಾಲ ದಿ. ರೆ. ಡಾ. ಲಿಯೋ ಡಿ ಸೋಜಾ ಎಸ್.ಜೆ. ಅವರಿಗೆ ಶ್ರದ್ಧಾಂಜಲಿ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ವತಿಯಿಂದ 'ವಿಜ್ಞಾನದಲ್ಲಿ ಮಹಿಳೆಯರು - ವಿಕಾಸಿತ ಭಾರತವನ್ನು

ವೇಗಗೊಳಿಸುವುದು' ಎಂಬ ವಿಷಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಗುರುವಾರ ವಿಶ್ವವಿದ್ಯಾಲಯದ ಎಲ್‌ಸಿಆರ್‌ಐ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಮಂಗಳೂರಿನ ಡಾ. ಪಿ. ದಯಾನಂದ ಪೈ - ಪಿ. ಸತೀಶ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ, ಸಸ್ಯಶಾಸ್ತ್ರದ ಪ್ರಾಧ್ಯಾಪಕ ಪ್ರೊ. ಜಯಕರ ಭಂಡಾರಿ ಮುಖ್ಯ ಅತಿಥಿಯಾಗಿದ್ದರು. ಸುರತ್ಕಲ್ ಎನ್‌ಐಟಿಕೆಯಲ್ಲಿ ರಾಸಾಯನಿಕ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ ಪ್ರೊ. ವಿದ್ಯಾ ಶೆಟ್ಟಿ ಗೌರವ ಅತಿಥಿಯಾಗಿದ್ದರು. ಅಲೋಶಿಯಸ್ ವಿವಿಯ ಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್, ಎಸ್.ಜೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಅಲೋಶಿಯಸ್ ವಿವಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಅಲೋಶಿಯಸ್ ವಿವಿಯ ಸಹಕುಲಪತಿ ರೆ.ಡಾ. ಮೆಲ್ವಿನ್ ಡಿ.ಕುನ್ಹಾ, ಎಸ್.ಜೆ., ವಿವಿಯ ರಿಜಿಸ್ಟ್ರಾರ್ ಡಾ. ರೊನಾಲ್ಡ್ ನಜರೆತ್, ಎಂಜಿನಿಯರಿಂಗ್ ಡೀನ್ ಡಾ. ರೂಬನ್ ಎಸ್., ಕ್ಸೇವಿಯರ್‌ಬ್ಲಾಕ್‌ನ ನಿರ್ದೇಶಕಿ ಡಾ. ಅರುಣಾ ಕಲ್ಕುರ ಟಿ., ಎಲ್ ಸಿಆರ್‌ಐ ಬ್ಲಾಕ್‌ನ ನಿರ್ದೇಶಕಿ ಡಾ. ಆಶಾ ಅಬ್ರಹಾಂ, ಕಾರ್ಯಕ್ರಮದ ಸಂಚಾಲಕಿ ಡಾ. ಜ್ಯೋತಿ ಮಿರಾಂಡಾ, ಸಹ ಸಂಚಾಲಕಿ ಡಾ. ಗೀತಾ ಪಿಂಟೊ, ಜೀವ ವಿಜ್ಞಾನದ ಡೀನ್ ಡಾ. ರೆನಿಟಾ ಮರಿಯಾ ಡಿ.ಸೋಜಾ ಇದ್ದರು.

ಇತ್ತೀಚೆಗೆ ನಿಧನರಾದ ವಿಶ್ವಪ್ರಸಿದ್ಧ ವಿಜ್ಞಾನಿ ಮತ್ತು ಅಲೋಶಿಯಸ್ ಕಾಲೇಜಿನ ಮಾಜಿ ಪ್ರಾಂಶುಪಾಲ ದಿ. ರೆ. ಡಾ. ಲಿಯೋ ಡಿ ಸೋಜಾ ಎಸ್.ಜೆ. ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ಜ್ಯೋತಿ ಮಿರಾಂಡಾ ಸ್ವಾಗತಿಸಿದರು. ಅಸೋಸಿಯೇಟ್ ಡೀನ್ ಡಾ. ಗೀತಾ ಪಿಂಟೊ ವಂದಿಸಿದರು. ಸಹಾಯಕ ಪ್ರಾಧ್ಯಾಪಕಿ ಅಕ್ಷಿತಾ ನಿರೂಪಿಸಿದರು.

Udayavani 03-03-2026

# ಅಲೋಶಿಯಸ್ ವಿವಿಯ ಎಂಜಿನಿಯರಿಂಗ್ ಶಾಲೆ: ರಾಷ್ಟ್ರೀಯ ವಿಜ್ಞಾನ ದಿನಾಚರಣೆ



**ಮಹಾನಗರ, ಮಾ. 2:** ಸಂತ ಅಲೋಶಿಯಸ್ ವಿವಿಯ ಎಂಜಿನಿಯರಿಂಗ್ ಶಾಲೆಯಲ್ಲಿ ವಿಗ್ಯಂತ್ರ – ವಿಜ್ಞಾನದೊಂದಿಗೆ ಭವಿಷ್ಯವನ್ನು ರೂಪಿಸುವುದು ಎಂಬ ವಿಷಯದ ಅಡಿಯಲ್ಲಿ 2026ರ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು.

ಮುಖ್ಯ ಅತಿಥಿ ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ ಅಂಗರಚನಾ ಶಾಸ್ತ್ರದ ಡೀನ್ ಮತ್ತು ಪ್ರಾಧ್ಯಾಪಕ ಡಾ| ಆಂಟನಿ ಸಿಲ್ವಾನ್ ಡಿ'ಸೋಜಾ ವೈಜ್ಞಾನಿಕ ವಿಚಾರಣೆ ಮತ್ತು ಅಂತರ್ ಶಿಸ್ತೀಯ ನಾವೀನ್ಯತೆಯನ್ನು ವಿವರಿಸಿದರು.

ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್ ಮತ್ತು ಎಲ್ ಸಿಆರ್ಐ ಬ್ಲಾಕ್‌ನ ನಿರ್ದೇಶಕಿ ಡಾ| ಆಶಾ ಅಬ್ರಹಾಂ ಉಪಸ್ಥಿತರಿದ್ದರು. ಎಂಜಿನಿಯರಿಂಗ್ ಶಾಲೆಯ ಡೀನ್ ಡಾ| ಎಸ್. ರೂಬನ್ ಸ್ವಾಗತಿಸಿ, ವಿದ್ಯಾರ್ಥಿಗಳಲ್ಲಿ ಸಂಶೋಧನಾ-ಆಧಾರಿತ ಚಿಂತನೆಯನ್ನು ಬೆಳೆಸುವ ಅಗತ್ಯದ ಬಗ್ಗೆ ಮಾತನಾಡಿದರು.

ಗೌರವ ಅತಿಥಿಯಾಗಿದ್ದ ಕರ್ನಾಟಕದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ ಡಾ| ಮೋಹಿತ್ ಪಿ. ತಹಿಲಿಯಾನಿ ಅವರು ನಿರಂತರ ಯಶಸ್ಸಿಗೆ ಸ್ಥಿರತೆ ಮತ್ತು ಸ್ಪಷ್ಟತೆಯು ಪ್ರಮುಖವಾಗಿದೆ ಎಂದರು.

ಸಂಯೋಜಕರಾದ ಡಾ| ಗೀತಾ ಪಿಂಟೋ ಮತ್ತು ಟೆನ್ಸನ್ ಜೋಸ್ ಹಾಗೂ ವಿದ್ಯಾರ್ಥಿ ಸಂಯೋಜಕರಾದ ಶಾಶ್ವತ್ ಶೆಟ್ಟಿ ಮತ್ತು ಮೊಹಮ್ಮದ್ ಸಫಾಫ್ ಸಂಯೋಜಿಸಿದರು. ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಅಸೋಸಿಯೇಟ್ ಡೀನ್ ಡಾ| ಗೀತಾ ಎಂ. ಪಿಂಟೋ ವಂದಿಸಿದರು.

*Indian Express 03-03-2026*

## National Science Day celebrated

Mangaluru: The School of Engineering of St Aloysius (Deemed-to-be University) celebrated National Science Day 2026 on campus under the theme 'Vigyantra-Engineering the Future with Science'. Dr Ronald Nazareth, registrar, and Asha Abraham, director, LCRI Block, were present. Dr S Ruban, Dean, highlighted the need to foster research-oriented thinking among students. Chief guest Dr Antony Sylvan D'Souza, dean and Professor of Anatomy, Father Muller Medical College, emphasised scientific inquiry and interdisciplinary innovation. Guest of honour Dr Mohit P Tahiliani of National Institute of Technology Karnataka underscored consistency and clarity as key to sustained success. ENS

*Varthabharathi 04-02-2026*

## ಸಂತ ಅಲೋಶಿಯಸ್ ಇಂಜಿನಿಯರಿಂಗ್ ಸ್ಕೂಲ್



ಮಂಗಳೂರು, ಮಾ.3: ಸಂತ ಅಲೋಶಿಯಸ್ ವಿವಿಯ ಇಂಜಿನಿಯರಿಂಗ್ ಸ್ಕೂಲ್ ವತಿಯಿಂದ 'ವಿಗ್ಯಂತ್ರ- ವಿಜ್ಞಾನದೊಂದಿಗೆ ಭವಿಷ್ಯವನ್ನು ರೂಪಿಸುವುದು' ಎಂಬ ವಿಷಯದ ಅಡಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಯಿತು.

ಫಾದರ್ ಮುಲ್ಲರ್ ವೈದ್ಯಕೀಯ ಕಾಲೇಜಿನ ಅಂಗರಚನಾಶಾಸ್ತ್ರದ ಡೀನ್ ಮತ್ತು ಪ್ರಾಧ್ಯಾಪಕ ಡಾ.ಆಂಟನಿ ಸಿಲ್ವಾನ್ ಡಿಸೋಜ ಮುಖ್ಯ ಅತಿಥಿಯಾಗಿದ್ದರು. ಕರ್ನಾಟಕದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ ಡಾ.ಮೋಹಿತ್ ಪಿ. ತಹಿಲಿಯಾನಿ ಗೌರವ ಅತಿಥಿಯಾಗಿದ್ದರು.

ರಿಜಿಸ್ಟ್ರಾರ್ ಡಾ.ರೊನಾಲ್ಡ್ ನಝ್ರೆತ್ ಮತ್ತು ಎಲ್‌ಸಿಆರ್ ಬ್ಲಾಕ್‌ನ ನಿರ್ದೇಶಕಿ ಡಾ.ಆಶಾ ಅಬ್ರಹಾಮ್ ಉಪಸ್ಥಿತರಿದ್ದರು. ಇಂಜಿನಿಯರಿಂಗ್ ಸ್ಕೂಲ್‌ನ ಡೀನ್ ಡಾ.ಎಸ್.ರೂಬನ್ ಸ್ವಾಗತಿಸಿದರು. ಸಂಯೋಜಕರಾದ ಡಾ.ಗೀತಾ ಪಿಂಟೊ, ಟೆನ್ಸನ್ ಜೋಸ್ ಹಾಗೂ ವಿದ್ಯಾರ್ಥಿ ಸಂಯೋಜಕರಾದ ಶಾಶ್ವತ್ ಶೆಟ್ಟಿ ಮತ್ತು ಮುಹಮ್ಮದ್ ಸಫಾಫ್ ಸಂಯೋಜಿಸಿದರು. ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಅಸೋಸಿಯೇಟ್ ಡೀನ್ ಡಾ.ಗೀತಾ ಎಂ. ಪಿಂಟೊ ವಂದಿಸಿದರು.

*Udayavani 05-03-2026*

# ಮಾ.7,8: ಮಂಗಳೂರು ಡಿಸೈನ್ ಶೃಂಗ ಸಭೆ

**ಉರ್ವ, ಮಾ. 4:** ದಿ ಓಹಾನಾ ಕಮ್ಯುನಿಟಿ ಫೌಂಡೇಶನ್, ಸಂತ ಅಲೋಶಿಯಸ್ ಸಂಸ್ಥೆಯ ಸಹಯೋಗದಲ್ಲಿ ಮಂಗಳೂರು ಡಿಸೈನ್ ಶೃಂಗ ಸಭೆ-2026 ಮಾ. 7 ಮತ್ತು 8ರಂದು ನಗರದ ಸಂತ ಅಲೋಶಿಯಸ್ ವಿ.ವಿ.ಯಲ್ಲಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮ ನಿರ್ದೇಶಕಿ ಅಲ್ಕ ಮನೋಜ್ ಮಾಹಿತಿ ನೀಡಿ, ಡಿಸೈನಿಂಗ್ ಫ್ಯೂಚರ್, ಹೋನರಿಂಗ್ ಹೆರಿಟೇಜ್ ಎಂಬ ವಿಷಯಾಧಾರಿತ ಎರಡು ದಿನಗಳ ಶೃಂಗ ಸಭೆಯಲ್ಲಿ ನಗರ ಯೋಜನೆ, ಸಮುದ್ರ ಪರಿಸರ ಶಾಸ್ತ್ರ ತ್ಯಾಜ್ಯ ನಿರ್ವಹಣೆ, ಪಾರಂಪರಿಕ ಸಂರಕ್ಷಣೆ ಹಾಗೂ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳ 20ಕ್ಕೂ ಹೆಚ್ಚು ತಜ್ಞರು ಭಾಗವಹಿಸಲಿದ್ದಾರೆ ಎಂದರು.

ಪ್ರಮುಖ ಭಾಷಣಕಾರರಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿ. ಜನರಲ್ ಮ್ಯಾನೇಜರ್ ಅರುಣ್ ಪ್ರಭಾ, ಬೇರೂ ಕಲೆಕ್ಟಿವ್ ಸಂಸ್ಥಾಪಕಿ ದಿವ್ಯಾ ಹೆಗ್ಡೆ ವಾಸ್ತುಶಿಲ್ಪಿ ಅಶೋಕ್ ಮೆಂಡೋನ್ಸಾ, ಗ್ರೀನ್ ಎಕ್ಸ್‌ಪರ್ಟ್ಸ್ ಸಂಸ್ಥಾಪಕಿ ಶೆರಾನ್ ಡಿ'ಸೋಜಾ, ನಿರೇನ್ ಜೈನ್ ಆರ್ಕಿಟೆಕ್ಟ್ ಆಂಡ್ ಎನ್ವಿರಾನ್‌ಮೆಂಟಲ್ ಪ್ಲಾನರ್ಸ್ ಸಂಸ್ಥಾಪಕ ನಿರೇನ್ ಜೈನ್, ಸಮುದ್ರ ಜೀವಶಾಸ್ತ್ರಜ್ಞ ಮತ್ತು ಪ್ರಕೃತಿ ಶಿಕ್ಷಕ ನಸ್ಕರ್ ಫರ್ನಾಂಡಿಸ್, ಬುಕೋ ಸಂಸ್ಥಾಪಕಿ ಶೆಫ್ ಶ್ರೀಯಾ ಶೆಟ್ಟಿ ಕದಿಕೆ ಟ್ರಸ್ಟ್ ಸಂಸ್ಥಾಪಕಿ ಮಮತಾ ರೈ, ಮಂಗಳೂರು ನಗರ ಪಾಲಿಕೆ ಪರಿಸರ ಅಧಿಕಾರಿ ಮಧು ಮನೋಹರ್ ಆರ್. ಸೇರಿದಂತೆ ಕರಾವಳಿ ಹೇರಿಟೇಜ್ ಕಲೆಕ್ಟಿವ್, ಆ್ಯಂಟಿ ಪಾಲ್ಯೂಷನ್ ಡ್ರೈವ್, ಹಸುರು ದಳ, ಅನಿಮಲ್ ಕೇರ್ ಟ್ರಸ್ಟ್ ಸೇರಿದಂತೆ ಹಲವು ನಾಗರಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು. ಅಂಜಲಿ ರಾವ್, ಚಾರ್ಲಿನ್ ಸಿಕ್ವೇರ ಉಪಸ್ಥಿತರಿದ್ದರು.

*Prajavani 05-03-2026*

# 'ಮಂಗಳೂರು ವಿನ್ಯಾಸ ಶೃಂಗ' 7ರಿಂದ

**ಮಂಗಳೂರು:** 'ದಿ ಓಹಾನಾ ಕಮ್ಯುನಿಟಿ ಫೌಂಡೇಷನ್ ವತಿಯಿಂದ ನಗರದ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಇದೇ 7 ರಂದು ಮತ್ತು 8ರಂದು 'ಮಂಗಳೂರು ಡಿಸೈನ್ ಶೃಂಗ-2026' ಅನ್ನು ಆಯೋಜಿಸಿದೆ' ಎಂದು ಸಂಸ್ಥೆಯ ಸಂಸ್ಥಾಪಕಿ ಅಲ್ಕಾ ಮನೋಜ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರಾವಳಿಯನ್ನು ಹೇಗೆ ಸಂರಕ್ಷಿಸಬೇಕು, ಕಸದ ನಿರ್ವಹಣೆ ಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಹೇಗೆ, ಪಾರಂಪರಿಕ ಕಟ್ಟಡ ಉಳಿಸಿಕೊಳ್ಳುವುದು ಹೇಗೆ, ನಗರದಲ್ಲಿ ಮಳೆಯಿಂದಾಗಿ ಎದುರಾಗುವ ಸಮಸ್ಯೆಗಳು, ತಾಪಮಾನ ಏರುಪೇರಿನ ಪರಿಣಾಮ ಮುಂತಾದ ವಿಚಾರಗಳ ಬಗ್ಗೆ ಸಂವಾದ ನಡೆಯಲಿವೆ. ಶೃಂಗದಲ್ಲಿ ಮಂಗಳೂರು ಸ್ಮಾರ್ಟ್ ಸಿಟಿ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಅರುಣ್ ಪ್ರಭಾ, 'ಬೇರೂ ಕಲೆಕ್ಟಿವ್' ಸಂಸ್ಥಾಪಕಿ ದಿವ್ಯಾ ಹೆಗ್ಡೆ, ವಾಸ್ತುಶಿಲ್ಪಿಗಳಾದ ಅಶೋಕ್ ಮೆಂಡೋನ್ಸ, ನಿರೇನ್ ಜೈನ್, ಗ್ರೀನ್ ಎಕ್ಸ್‌ಪರ್ಟ್ಸ್ ಸಂಸ್ಥಾಪಕಿ ಶೆರಾನ್ ಡಿಸೋಜ, ಸಮುದ್ರ ಜೀವವಿಜ್ಞಾನಿ ನೆಸ್ಸರ್ ಫರ್ನಾಂಡಿಸ್, ಬುಕೋ ಸಂಸ್ಥಾಪಕಿ ಶೆಫ್ ಶ್ರಿಯಾ ಶೆಟ್ಟಿ, ಕದಿಕೆ ಟ್ರಸ್ಟ್ ಸಂಸ್ಥಾಪಕಿ ಮಮತಾರೈ, ಪರಿಸರ ಅಧಿಕಾರಿ ಮಧು ಮನೋಹರ್ ಸೇರಿ 20ಕ್ಕೂ ಹೆಚ್ಚು ತಜ್ಞರು ಪಾಲ್ಗೊಳ್ಳುವರು' ಎಂದರು.

ಸಂಸ್ಥೆಯ ಸಹಸಂಸ್ಥಾಪಕಿ ಅಂಜಲಿ ರಾವ್, ಸಲಹೆಗಾರ್ತಿ ಶಾರ್ಲಿನ್ ಸಿಕ್ವೇರಾ ಭಾಗವಹಿಸಿದ್ದರು.

*Hosadigantha 05-03-2026*

## ಮಾ.8ರಂದು ಮಂಗಳೂರಿನಲ್ಲಿ ಶೃಂಗಸಭೆ

**ಮಂಗಳೂರು:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಾದ್ಯಾಲಯದಲ್ಲಿ ಮಾ.7 ಮತ್ತು 8ರಂದು ಮಂಗಳೂರು ಡಿಸೈನ್ ಶೃಂಗ ಸಭೆ-2026ನ್ನು ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ನಿರ್ದೇಶಕಿ ಅಲ್ಕ ಮನೋಜ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಿ ಓಹಾನಾ ಕಮ್ಯುನಿಟಿ ಫೌಂಡೇಶನ್, ಸಂತ ಆಲೋಶಿಯಸ್ ಸಂಸ್ಥೆಯ ಸಹಯೋಗದಲ್ಲಿ ಈ ಶೃಂಗ ಸಭೆನಡೆಯಲಿದೆ. ಡೆಸಿಗ್ನಿಂಗ್ ಫ್ಯೂಚರ್, ಹೋನರಿಂಗ್ ಹೆರಿಟೇಜ್ ಕುರಿತ ಈ ಶೃಂಗ ಸಭೆಯಲ್ಲಿ ನಗರ ಯೋಜನೆ, ಸಮುದ್ರ ಪರಿಸರ ಶಾಸ್ತ್ರ, ತ್ಯಾಜ್ಯ ನಿರ್ವಹಣೆ, ಪಾರಂಪರಿಕ ಸಂರಕ್ಷಣೆ ಹಾಗೂ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳ 20ಕ್ಕೂ ಹೆಚ್ಚು ತಜ್ಞರು ಭಾಗವಹಿಸಲಿದ್ದಾರೆ ಎಂದರು.

ನಗರದಲ್ಲಿ ಕಳೆದ ಕೆಲವು ವರ್ಷಗಳಿಂದಾಗುತ್ತಿರುವ ಮಳೆ ಅನಾಹುತ, ಪ್ರವಾಹ, ತಾಪಮಾನದಲ್ಲಿನ ವ್ಯತ್ಯಯ, ತ್ಯಾಜ್ಯ ನಿರ್ವಹಣೆಯ ಸವಾಲುಗಳು ಇತ್ಯಾದಿ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಪ್ರಮುಖ ಭಾಷಣಕಾರರಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿ. ಜನರಲ್ ಮ್ಯಾನೇಜರ್ ಅರುಣ್ ಪ್ರಭಾ, ಬೇರೂ ಕಲೆಕ್ಟಿವ್ ಸಂಸ್ಥಾಪಕಿ ದಿವ್ಯ ಹೆಗ್ಡೆ, ವಾಸ್ತುಶಿಲ್ಪಿ ಅಶೋಕ್ ಮೆಂಡೋನ್ಸಾ, ಗ್ರೀನ್ ಎಕ್ಸ್‌ಪರ್ಟ್ಸ್ ಸಂಸ್ಥಾಪಕಿ ಶೆರಾನ್ ಡಿಸೋಜಾ ಮತ್ತಿತರರು ಪಾಲ್ಗೊಳ್ಳುವರು ಎಂದವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಂಜಲಿ ರಾವ್, ಚಾರ್ಲಿನ್ ಸಿಕ್ವೇರ ಉಪಸ್ಥಿತರಿದ್ದರು.

*Samyuktha Karnataka 05-03-2026*

## ಮಂಗಳೂರಿನಲ್ಲಿ ಶೃಂಗಸಭೆ ಮಾ.7–8ಕ್ಕೆ

**ಮಂಗಳೂರು:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾಲಯದಲ್ಲಿ ಮಾ.7 ಮತ್ತು 8ರಂದು ಮಂಗಳೂರು ಡಿಸೈನ್ ಶೃಂಗ ಸಭೆ-2026ನ್ನು ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ನಿರ್ದೇಶಕರಾದ ಅಲ್ಕ ಮನೋಜ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಿ ಓಹಾನಾ ಕಮ್ಯುನಿಟಿ ಫೌಂಡೇಶನ್, ಸಂತ ಅಲೋಶಿಯಸ್ ಸಂಸ್ಥೆಯ ಸಹಯೋಗದಲ್ಲಿ ಈ ಶೃಂಗ ಸಭೆನಡೆಯಲಿದೆ.

ಡೆಸಿಗ್ನಿಂಗ್ ಫ್ಯೂಚರ್, ಹೋನರಿಂಗ್ ಹೆರಿಟೇಜ್ ಕುರಿತ ಈ ಶೃಂಗ ಸಭೆಯಲ್ಲಿ ನಗರ ಯೋಜನೆ, ಸಮುದ್ರ ಪರಿಸರ ಶಾಸ್ತ್ರ, ತ್ಯಾಜ್ಯ ನಿರ್ವಹಣೆ, ಪಾರಂಪರಿಕ ಸಂರಕ್ಷಣೆ ಹಾಗೂ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳ 20ಕ್ಕೂ ಹೆಚ್ಚು ತಜ್ಞರು ಭಾಗವಹಿಸಲಿದ್ದಾರೆ ಎಂದರು.

ನಗರದಲ್ಲಿ ಕಳೆದ ಕೆಲವು ವರ್ಷಗಳಿಂದಾಗುತ್ತಿರುವ ಮಳೆ ಅನಾಹುತ, ಪ್ರವಾಹ, ತಾಪಮಾನದಲ್ಲಿನ ವ್ಯತ್ಯಯ, ತ್ಯಾಜ್ಯ ನಿರ್ವಹಣೆಯ ಸವಾಲುಗಳು ಇತ್ಯಾದಿ ವಿಷಯಗಳ ಕುರಿತು ಚರ್ಚೆ ನಡೆಯಲಿದೆ.

ಪ್ರಮುಖ ಭಾಷಣಕಾರರಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿ. ಜನರಲ್ ಮ್ಯಾನೇಜರ್ ಅರುಣ್ ಪ್ರಭಾ, ಬೇರೂ ಕಲೆಕ್ಟಿವ್ ಸಂಸ್ಥಾಪಕಿ ದಿವ್ಯ ಹೆಗ್ಡೆ, ವಾಸ್ತುಶಿಲ್ಪಿ ಅಶೋಕ್ ಮೆಂಡೋನ್ಸಾ, ಗ್ರೀನ್ ಎಕ್ಸ್‌ಪರ್ಟ್ಸ್ ಸಂಸ್ಥಾಪಕಿ ಶೆರಾನ್ ಡಿಸೋಜಾ ಮತ್ತಿತರರು ಪಾಲ್ಗೊಳ್ಳುವರು ಎಂದವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಂಜಲಿ ರಾವ್, ಚಾರ್ಲಿನ್ ಸಿಕ್ವೇರ ಉಪಸ್ಥಿತರಿದ್ದರು.

*Vijayavani 06-03-2026*

## ಅಲೋಶಿಯಸ್‌ನಲ್ಲಿ ಡಿಸೈನ್ ಸಮ್ಮಿಟ್

**ಮಂಗಳೂರು:** ದಿ ಒಹಾನಾ ಕಮ್ಯೂನಿಟಿ ಫೌಂಡೇಶನ್ ವತಿಯಿಂದ ಮಂಗಳೂರು ನಗರದ ಅಭಿವೃದ್ಧಿ ದೃಷ್ಟಿಕೋನದಲ್ಲಿ ಮಂಗಳೂರು ಡಿಸೈನ್ ಸಮ್ಮಿಟ್-2026 ಸೇಂಟ್ ಅಲೋಶಿಯಸ್ ಡೀಮ್ಡ್ ಟು ಬಿ ಯುನಿವರ್ಸಿಟಿಯಲ್ಲಿ ಮಾರ್ಚ್ 7, 8ರಂದು ನಡೆಯಲಿದೆ ಎಂದು ಫೌಂಡೇಶನ್‌ನ ಅಲ್ಕಾ ಮನೋಜ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಪರಂಪರೆಯೊಂದಿಗೆ ವಿನ್ಯಾಸ, ಹವಾಮಾನ ಪ್ರತಿಕ್ರಿಯಾಶೀಲ ಭವಿಷ್ಯ, ವಸ್ತುಗಳು, ಕಸ ಮತ್ತು ವಲಯ ಆರ್ಥಿಕತೆ ಮತ್ತು ವಾಸಯೋಗ್ಯ, ಸಮಾವೇಶಿತ ನಗರಗಳು ಈ ನಾಲ್ಕು ವಿಷಯಗಳನ್ನು ಮುಂದಿಟ್ಟುಕೊಂಡು ಕಾರ್ಯಕ್ರಮದಲ್ಲಿ ಚರ್ಚೆ ನಡೆಯಲಿದೆ ಎಂದು ತಿಳಿಸಿದರು.

*Deccan Herald*
*06-03-2026*

# 'Mangaluru Design Summit' from tomorrow

**MANGALURU, DHNS:** The Ohana Community Foundation, in association with the St Aloysius Deemed-to-be-University, will organise two-day 'Mangaluru Design Summit' at the St Aloysius University on March 7 and 8.

The two-day summit is themed 'Designing Futures, Honouring Heritage' and will bring together over 20 speakers from diverse fields, including urban planning, marine ecology, waste management, heritage conservation, and governance.

The prominent guest speakers for the summit are Arun Prabha, General Manager, Mangaluru Smart City Ltd, Divya Hegde, Founder, Baeru Collective, Ashok Mendonca, Architect & Urban Planner, Sharon D'Souza, Founder, Green Xperts, Niren Jain, Founder, Niren Jain Architects & Environmental Planners, Nester Fernandes, Marine Biologist & Nature Educator, Chef Shriya Shetty, Founder, BuCo, Mamatha Rai, Founder, Kadike Trust and Madhu Manohar R, Environmental Officer, Mangaluru City Corporation.

*Kannadaprabha 06-03-2026*

# 7, 8ರಂದು ಮಂಗಳೂರು ಡಿಸೈನ್ ಶೃಂಗ ಸಭೆ

**ಮಂಗಳೂರು:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಮಾ.7, 8ರಂದು 'ಮಂಗಳೂರು ಡಿಸೈನ್ ಶೃಂಗ ಸಭೆ- 2026' ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ನಿರ್ದೇಶಕಿ ಅಲ್ಕ ಮನೋಜ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿ ಓಹಾನಾ ಕಮ್ಯುನಿಟಿ ಫೌಂಡೇಶನ್, ಸಂತ ಅಲೋಶಿಯಸ್ ಸಂಸ್ಥೆಯ ಸಹಯೋಗದಲ್ಲಿ ಈ ಶೃಂಗ ಸಭೆ ನಡೆಯಲಿದೆ. ಈ ಶೃಂಗ ಸಭೆಯಲ್ಲಿ ನಗರ ಯೋಜನೆ, ಸಮುದ್ರ ಪರಿಸರ ಶಾಸ್ತ್ರ, ತ್ಯಾಜ್ಯ ನಿರ್ವಹಣೆ, ಪಾರಂಪರಿಕ ಸಂರಕ್ಷಣೆ ಹಾಗೂ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳ 20ಕ್ಕೂ ಹೆಚ್ಚು ತಜ್ಞರು ಭಾಗವಹಿಸಲಿದ್ದಾರೆ ಎಂದರು.

ಪ್ರಮುಖ ಭಾಷಣಕಾರರಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿ. ಜನರಲ್ ಮ್ಯಾನೆಜರ್ ಅರುಣ್ ಪ್ರಭಾ, ಬೇರೂ ಕಲೆಕ್ಟಿವ್ ಸಂಸ್ಥಾಪಕಿ ದಿವ್ಯ ಹೆಗ್ಡೆ, ವಾಸ್ತುಶಿಲ್ಪಿ ಅಶೋಕ್ ಮೆಂಡೋನ್ಸಾ, ಗ್ರೀನ್ ಎಕ್ಸ್‌ಪರ್ಟ್ ಸಂಸ್ಥಾಪಕಿ ಶೆರಾನ್ ಡಿಸೋಜ ಮತ್ತಿತರರು ಪಾಲ್ಗೊಳ್ಳುವರು ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಂಜಲಿ ರಾವ್, ಚಾರ್ಲಿನ್ ಸಿಕ್ವೇರ ಇದ್ದರು.

*Varthabharathi 06-03-2026*

## ಮಾ.10: ಮದರ್ ತೆರೇಸಾ ವಿಚಾರ ವೇದಿಕೆಯಿಂದ ಸೌಹಾರ್ದ ಇಫ್ತಾರ್ ಕೂಟ

ಮಂಗಳೂರು, ಮಾ.5: ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ಆಶ್ರಯದಲ್ಲಿ ರಮಝಾನ್ ಪ್ರಯುಕ್ತ ಸೌಹಾರ್ದ ಇಫ್ತಾರ್ ಕೂಟವನ್ನು ಮಾ.10ರಂದು ಸಂಜೆ 5:15ಕ್ಕೆ ಬಾವುಟಗುಡ್ಡದಲ್ಲಿರುವ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಅತಿಥಿಗಳಾಗಿ ಚೊಕ್ಕಬೆಟ್ಟು ಮಸೀದಿಯ ಖತೀಬ್ ಮೌಲಾನ ಯು.ಕೆ. ಅಬ್ದುಲ್ ಅಝೀಝ್ ದಾರಿಮಿ, ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಸಹ ಉಪಕುಲಪತಿ ಡಾ.ಮೆಲ್ವಿನ್ ಡಿಕುನ್ಹ, ಹಿರಿಯ ಲೇಖಕಿ ಬಿ.ಎಂ. ರೋಹಿಣಿ, ಝೀನತ್ ಬಕ್ಷ್ ಜುಮಾ ಮಸ್ಜಿದ್ ಉಪಾಧ್ಯಕ್ಷ ಕೆ.ಅಶ್ರಫ್ ಭಾಗವಹಿಸಲಿದ್ದಾರೆ. ವೇದಿಕೆಯ ಅಧ್ಯಕ್ಷ ರೋಯ್ ಕ್ಯಾಸ್ತಲಿನೋ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

*Vijayakarnatka 06-03-2026*

## 10ರಂದು ಸೌಹಾರ್ದ ಇಫ್ತಾರ್

**ಮಂಗಳೂರು:** ಸಂತ ಮದರ್ ತೆರೇಸಾ ವಿಚಾರ ವೇದಿಕೆ ಆಶ್ರಯದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಸೌಹಾರ್ದ ಇಫ್ತಾರ್ ಕೂಟ ಮಾ.10ರಂದು ಸಂಜೆ 5.15ಕ್ಕೆ ಬಾವುಟಗುಡ್ಡದಲ್ಲಿರುವ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಚೊಕ್ಕಬೆಟ್ಟುವಿನ ಮೊಹಿಯುದ್ದೀನ್ ಜುಮಾ ಮಸ್ಜಿದ್‌ನ ಧರ್ಮಗುರು ಮೌಲಾನಾ ಯು.ಕೆ.ಅಬ್ದುಲ್ ಅಜೀಜ್ ದಾರಿಮಿ, ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಸಹ ಉಪಕುಲಪತಿ ಡಾ.ಮೆಲ್ವಿನ್ ಡಿಕುನ್ಹಾ, ಸಾಹಿತಿ ಬಿ.ಎಂ.ರೋಹಿಣಿ, ಬಾವುಟಗುಡ್ಡ ಝೀನತ್ ಭಕ್ಷ್ ಜುಮಾ ಮಸ್ಜಿದ್ ಉಪಾಧ್ಯಕ್ಷ ಕೆ. ಅಶ್ರಫ್ ಭಾಗವಹಿಸಿ, ಸೌಹಾರ್ದ ಸಂದೇಶಗಳನ್ನು ನೀಡಲಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಸಂತ ಮದರ್ ತೆರೇಸಾ ವಿಚಾರ ವೇದಿಕೆ ಅಧ್ಯಕ್ಷ ರೋಯ್ ಕ್ಯಾಸ್ಟಲಿನೋ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Vijayavani 07-03-2026

# ಪ್ರತಿಭೋತ್ಸವದಲ್ಲಿ ರಾಜ್ಯಕ್ಕೆ ಪ್ರಥಮ



**ಮಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಏರ್ಪಡಿಸಿದ ರಾಜ್ಯಮಟ್ಟದ ಕಲಾ ಪ್ರತಿಭೋತ್ಸವ ಸ್ಪರ್ಧೆಯ ಯುವಪ್ರತಿಭೆ ವಿಭಾಗದಲ್ಲಿ ಮಹತಿ ಪವನಾಸ್ಕರ್ ಭರತನಾಟ್ಯದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಮಂಗಳೂರಿನ ಗಾನ ನೃತ್ಯ ಅಕಾಡೆಮಿಯ ನಿರ್ದೇಶಕಿ, ಗುರು ವಿದ್ಯಾಶ್ರೀ ರಾಧಾಕೃಷ್ಣ ಅವರ ಶಿಷ್ಯೆಯಾಗಿರುವ ಇವರು, ಸಂತ ಅಲೋಶಿಯಸ್ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಇವರು ಹರೀಶ್ ಪವನಾಸ್ಕರ್-ಮಾಲಿನಿ ದಂಪತಿ ಪುತ್ರಿ.

Udayavani 08-03-2026

# ಮಂಗಳೂರು ಡಿಸೈನ್ ಶೃಂಗ ಸಭೆಗೆ ಚಾಲನೆ

**ಬಾವುಟಗುಡ್ಡೆ ಮಾ.7:** ದಿ ಓಹಾನಾ ಕಮ್ಯುನಿಟಿ ಫೌಂಡೇಶನ್, ಸಂತ ಅಲೋಶಿಯಸ್ ಸಂಸ್ಥೆಯ ಸಹಯೋಗದಲ್ಲಿ ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಎರಡು ದಿನಗಳ ಮಂಗಳೂರು ಡಿಸೈನ್ ಶೃಂಗ ಸಭೆ-2026ಕ್ಕೆ ಶನಿವಾರ ಚಾಲನೆ ದೊರೆಯಿತು.

ಮೊದಲನೇ ದಿನ ಪ್ರಮುಖ ಭಾಷಣಕಾರರಾಗಿ ಗ್ರೀನ್ ಎಕ್ಸ್‌ಪರ್ಟ್ಸ್ ಸಂಸ್ಥಾಪಕಿ ಶೆರಾನ್ ಡಿ'ಸೋಜಾ, ನಿರೇನ್ ಜೈನ್ ಆರ್ಕಿಟೆಕ್ಟ್ ಆಂಡ್ ಎನ್ವಿರಾನ್‌ಮೆಂಟಲ್ ಪ್ಲಾನರ್ಸ್ ಸಂಸ್ಥಾಪಕ ನಿರೇನ್ ಜೈನ್, ಕಲಾವಿದ ಸಂತೋಷ್ ಅಂದ್ರಾದೆ, ಕದಿಕೆ ಟ್ರಸ್ಟ್ ಸಂಸ್ಥಾಪಕಿ ಮಮತಾ ರೈ, ಮಂಗಳೂರು ನಗರ ಪಾಲಿಕೆ ಪರಿಸರ ಅಧಿಕಾರಿ ಮಧು ಮನೋಹರ್ ಆರ್., ಫ್ಯಾಶನ್ ಕ್ಷೇತ್ರದ ಪ್ರಮುಖರಾದ ಮೈತ್ರಿ ರವಿಶಂಕರ್ ಅವರು ಭಾಗವಹಿಸಿದ್ದರು.

ಡಿಸೈನಿಂಗ್ ಫ್ಯೂಚರ್, ಹೋನರಿಂಗ್ ಹೆರಿಟೇಜ್ ಎಂಬ ವಿಷಯಾಧಾರಿತ ಎರಡು ದಿನಗಳ ಶೃಂಗ ಸಭೆಯಲ್ಲಿ ನಗರ ಯೋಜನೆ, ಸಮುದ್ರ ಪರಿಸರ ಶಾಸ್ತ್ರ, ತ್ಯಾಜ್ಯ ನಿರ್ವಹಣೆ, ಪಾರಂಪರಿಕ ಸಂರಕ್ಷಣೆ ಹಾಗೂ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳ ತಜ್ಞರು ಎರಡು ದಿನಗಳಲ್ಲಿ ಮಾಹಿತಿ ಕಾರ್ಯಕ್ರಮ ನಡೆಯುತ್ತಿದೆ. .

ಮಾ. 8ರಂದು ಪ್ರಮುಖ ಭಾಷಣಕಾರರಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿ. ಜನರಲ್ ಮ್ಯಾನೇಜರ್ ಅರುಣ್ ಪ್ರಭಾ, ಬೇರೂ ಕಲೆಕ್ಟಿವ್ ಸಂಸ್ಥಾಪಕಿ ದಿವ್ಯ ಹೆಗ್ಡೆ, ವಾಸ್ತುಶಿಲ್ಪಿ ಅಶೋಕ್ ಮೆಂಡೋನ್ಸಾ, ಸಮುದ್ರ ಜೀವಶಾಸ್ತ್ರಜ್ಞ ಮತ್ತು ಪ್ರಕೃತಿ ಶಿಕ್ಷಕ ನಸ್ಕರ್ ಫರ್ನಾಂಡಿಸ್,



ಬುಕೋ ಸಂಸ್ಥಾಪಕಿ ಶಫ್ ಶ್ರೀಯಾ ಶೆಟ್ಟಿ ಸೇರಿದಂತೆ ಕರಾವಳಿ ಹೆರಿಟೇಜ್ ಕಲೆಕ್ಟಿವ್, ಆ್ಯಂಟಿ ಪೊಲ್ಯೂಷನ್ ಡ್ರೈವ್, ಹಸುರು ದಳ, ಅನಿಮಲ್ ಕೇರ್‌ಟ್ರಸ್ಟ್ ಸೇರಿದಂತೆ ಹಲವು ನಾಗರಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಸಂತ ಅಲೋಶಿಯಸ್ ವಿ.ವಿ. ಕುಲಪತಿ ರೆ। ಫಾ। ಪ್ರವೀಣ್ ಮಾರ್ಟಿಸ್, ದಿ ಓಹಾನಾ ಕಮ್ಯುನಿಟಿ ಫೌಂಡೇಶನ್ ಸ್ಥಾಪಕಿ, ಕಾರ್ಯಕ್ರಮ ನಿರ್ದೇಶಕಿ ಅಲ್ಕ ಮನೋಜ್, ಸಹ ಸಂಸ್ಥಾಪಕಿ ಅಂಜಲಿ ರಾವ್, ಸುಸ್ಥಿರ ಅಭಿವೃದ್ಧಿ ತಂತ್ರಜ್ಞೆ ಶಾರ್ಲಿನ್ ಸಿಕ್ವೇರ, ಎಕೋ ವಾರಿಯರ್ಸ್ ಗ್ಲಾವಿನ್ ಇದ್ದರು.

*Udayavani 08-03-2026*

# ಗೋಪಿಕಾ ಎಲ್. ರಮೇಶ್ ಅವರಿಗೆ ಪಿಎಚ್.ಡಿ.



**ಮಹಾನಗರ,ಮಾ.7:** ಮಂಗಳೂರಿನ ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕಿ ಗೋಪಿಕಾ ಎಲ್. ರಮೇಶ್ ಅವರಿಗೆ ಬೆಂಗಳೂರಿನ ಕ್ರೈಸ್ಟ್ ವಿವಿಯಿಂದ ಇಂಗ್ಲಿಷ್ ಅಧ್ಯಯನದಲ್ಲಿ ಪಿಎಚ್.ಡಿ. ಲಭಿಸಿದೆ.

ಅವರು ಮಂಡಿಸಿದ 'ನೆಗೋಶಿಯೇಟಿಂಗ್ ಪರ್ಸನ್‌ಹುಡ್ ಇನ್ ಪೋಸ್ಟ್-ಕಾಲೋನಿಯಲ್ ಟ್ರಿನಿಡಾಡ್: ರೀಡಿಂಗ್ ಪಬ್ಲಿಕ್ ಸ್ಪೇಸಸ್ ಇನ್ ಸೆಲೆಕ್ಟ್ ನಾವೆಲ್ಸ್ ಆಫ್ ಅರ್ಲ್ ಲವ್ಲೇಸ್' ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಲಭಿಸಿದೆ. ಅವರು ಕೆ.ವಿ. ವಿಷ್ಣು ಅವರ ಪತ್ನಿ.

*Udavayani 09-03-2026*

# ಅಲೋಶಿಯಸ್ ಕ್ಯಾಂಪಸ್: 51 ಜಾತಿಯ ಪಕ್ಷಿಗಳು ಪತ್ತೆ

**ಬಾವುಟಗುಡ್ಡೆ ಮಾ. 8:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಎಐಎಂಐಟಿ ಕ್ಯಾಂಪಸ್‌ನಲ್ಲಿ ಬರ್ಡ್ ಕೌಂಟ್ ಇಂಡಿಯಾ ಇಬರ್ಡ್ ಸಹಯೋಗದೊಂದಿಗೆ ಆಯೋಜಿಸಿದ ರಾಷ್ಟ್ರವ್ಯಾಪಿ ಗ್ರೇಟ್ ಬ್ಯಾಕ್ ಯಾರ್ಡ್ ಬರ್ಡ್ ಕೌಂಟ್‌ನ ಭಾಗವಾಗಿ ಕ್ಯಾಂಪಸ್ ಬರ್ಡ್ ಕೌಂಟ್-2026 ಅನ್ನು ನಡೆಸಲಾಯಿತು.

ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಕಿರಣ್ ವಟಿ ಕೆ. ಮತ್ತು ಗ್ಲಾವಿನ್ ಥಾಮಸ್ ರೊಡ್ರಿಗಸ್ ಅವರ ಮಾರ್ಗದರ್ಶನದಲ್ಲಿ ಪ್ರಾಣಿಶಾಸ್ತ್ರ ವಿಭಾಗದ ಅಧ್ಯಾಪಕ ಸದಸ್ಯರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಮೀಕ್ಷೆಯು ಕ್ಯಾಂಪಸ್‌ನೊಳಗಿನ ವಿವಿಧ ಆವಾಸಸ್ಥಾನಗಳಲ್ಲಿ ಪಕ್ಷಿ ವೈವಿಧ್ಯತೆಯ ವ್ಯವಸ್ಥಿತ ವೀಕ್ಷಣೆ ಮತ್ತು ದಾಖಲಾತಿಯನ್ನು ಒಳಗೊಂಡಿತ್ತು. ಈ ವರ್ಷದ ಎರಡು ದಿನಗಳ ಸಮೀಕ್ಷೆಯಲ್ಲಿ ಕ್ಯಾಂಪಸ್ ನಲ್ಲಿ 51 ಜಾತಿಯ ಪಕ್ಷಿಗಳನ್ನು ದಾಖಲಿಸಲಾಗಿದೆ.

## ಪ್ರಮುಖ ಪಕ್ಷಿಗಳು





ನವಿಲು, ರಾಕ್ ಪಾರಿವಾಳ ಮತ್ತು ಚುಕ್ಕೆ ಪಾರಿವಾಳ, ಬಿಳಿ-ಎದೆಯ ವಾಟರ್ ಹೆನ್, ಕಾಮನ್ ಸ್ಯಾಂಡ್ ಪೈಪರ್, ಇಂಡಿಯನ್ ಪಾಂಡ್-ಹೆರಾನ್, ಈಸ್ಟರ್ನ್ ಕ್ಯಾಟಲ್ ಎಗ್ರೆಟ್ ಮತ್ತು ಗ್ರೇಟ್ ಎಗ್ರೆಟ್, ಕ್ರೆಸ್ಟೆಡ್ ಸರ್ಪೆಂಟ್-ಈಗಲ್, ಶಿಕ್ರಾ, ಬ್ಲ್ಯಾಕ್ ಕೈಟ್ ಮತ್ತು ಬ್ರಾಹ್ಮಿನಿ ಕೈಟ್‌ನಂತಹ ರಾಪ್ಟರ್, ಆಶಿ ಡ್ರೊಂಗೊ, ಗ್ರೇಟರ್ ರಾಕೆಟ್-ಟೈಲ್ಡ್ ಡ್ರೊಂಗೊ, ಗ್ರೀನ್ ವಾರ್ಬ್ಲರ್ ಮತ್ತು ಇಂಡಿಯನ್ ಪ್ಯಾರಡೈಸ್-ಫ್ಲೈಕ್ಯಾಚರ್, ಬಿಳಿ-ಕೆನ್ನೆಯ ಬಾರ್ಬೆಟ್, ಕಪ್ಪು-ರಂಪ್ಡ್ ಫ್ಲೇಮ್‌ಬ್ಯಾಕ್, ಗುಲಾಬಿ-ರಿಂಗ್ಡ್ ಪ್ಯಾರಕೀಟ್, ಕಪ್ಪು-ಹುಡೆಡ್ ಓರಿಯೊಲ್ ಮತ್ತು ಭಾರತೀಯ ಗೋಲ್ಡನ್ ಓರಿಯೊಲ್ ಪರ್ಪಲ್-ರಂಪ್ಡ್ ಸನ್ ಬರ್ಡ್, ಲೋಟೆನ್ಸ್ ಸನ್ ಬರ್ಡ್ ಮತ್ತು ಗೋಲ್ಡನ್-ಫ್ರಂಟೆಡ್ ಲೀಫ್ ಬರ್ಡ್, ಬ್ಲ್ಯಾಕ್-ನೇಪ್ಡ್ ಮೊನಾರ್ಕ್, ಓರಿಯಂಟಲ್ ಮ್ಯಾಗ್ಪಿ-ರಾಬಿನ್, ಆರೆಂಜ್-ಹೆಡೆಡ್ ಥ್ರಷ್, ಸ್ಕೇಲಿ-ಬ್ರೆಸ್ಟೆಡ್ ಮ್ಯೂನಿಯಾ ಮತ್ತು ವೈಟ್-ರಂಪ್ಡ್ ಮ್ಯೂನಿಯಾ ಸೇರಿದಂತೆ ಬುಲ್ಬುಲ್‌ಗಳು, ಬಾಬ್ಲರ್‌ಗಳು, ಮುನಿಯಾಗಳು, ಮೈನಾಗಳು ಮತ್ತು ಫ್ಲೈಕ್ಯಾಚರ್‌ಗಳನ್ನು ಪತ್ತೆ ಮಾಡಲಾಗಿದೆ.

ಕ್ಯಾಂಪಸ್‌ನಾದ್ಯಂತ ಕಂಡುಬರುವ ವಿವಿಧ ಪಕ್ಷಿ ಪ್ರಭೇದಗಳನ್ನು ಕಿರಣ್ ವತಿ ಕೆ. ಅವರ ಲೆನ್ಸ್ ಮೂಲಕ ಸೆರೆಹಿಡಿಯಲಾಯಿತು.

ಇದರೊಂದಿಗೆ ಕ್ಯಾಂಪ ಸ್ ನ 17 ಎಕರೆ ಹಸಿರು ಪರಿಸ ರದಲ್ಲಿ 2022ರಿಂದ ಒಟ್ಟು 73 ಪಕ್ಷಿ ಪ್ರಭೇದಗಳು ದಾಖಲಾಗಿದೆ.

*Varthabharathi 11-03-2026*

# ಮದರ್ ತೆರೇಸಾ ವಿಚಾರ ವೇದಿಕೆಯಿಂದ ಸೌಹಾರ್ದ ಇಫ್ತಾರ್ ಕೂಟ




ಮಂಗಳೂರು, ಮಾ.10: ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ವತಿಯಿಂದ ಮಂಗಳವಾರ ನಗರದ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದ ಆವರಣದಲ್ಲಿ ಸೌಹಾರ್ದ ಇಫ್ತಾರ್ ಕೂಟ ಆಯೋಜಿಸಲಾಗಿತ್ತು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸಹ ಕುಲಪತಿ ಫಾ.ಮೆಲ್ವಿನ್ ಡಿಕುನ್ಹ ಎಸ್.ಜೆ.ಮಾತನಾಡಿ, 'ಮನುಷ್ಯನ ನಡೆ ಮತ್ತು ನುಡಿ ಹೇಗಿದೆಯೆಂಬುದು ಮುಖ್ಯ. ಕೇವಲ ತೋರ್ಪಡಿಕೆಯ ನಡವಳಿಕೆ ವ್ಯರ್ಥ. ಸಮಾಜದಲ್ಲಿ ಬಂಧುತ್ವ, ಶಾಂತಿ ಬೆಳೆಯಲಿ' ಎಂದು ಹಾರೈಸಿದರು.

ಚೊಕ್ಕಬೆಟ್ಟುವಿನ ಮುಹಿಯುದ್ದೀನ್ ಜುಮಾ ಮಸ್ಜಿದ್‌ನ ಧರ್ಮಗುರು ಮೌಲಾನ ಯು.ಕೆ.ಅಬ್ದುಲ್ ಅಝೀಝ್ ದಾರಿಮಿ ಮಾತನಾಡಿ, 'ಮನುಷ್ಯನ ನಡೆ, ನುಡಿ, ಗುಣ ಸರಿಯಿದ್ದಲ್ಲಿ ಜೀವನ ಚೆನ್ನಾಗಿರುತ್ತದೆ. ದ್ವೇಷ, ಕೋಪ ಬರುವ ಸನ್ನಿವೇಶದಲ್ಲಿ ಪ್ರೀತಿ ಮೂಡುವಂತಾಗಬೇಕು. ನಮ್ಮವರ ಜೊತೆ ನಾವು ಪ್ರೀತಿಯನ್ನು ತೋರಬೇಕು. ಆಗ ಬೇರೆಯವರ ಜೊತೆಯೂ ಪ್ರೀತಿ ತೋರಿಸಲು ಸಾಧ್ಯವೆಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವೇದಿಕೆಯ ಅಧ್ಯಕ್ಷ ರೊಯ್ ಕ್ಯಾಸ್ಟಲಿನೊ, 'ಕಳೆದ 8 ವರ್ಷಗಳಿಂದ ಜಿಲ್ಲೆಯಲ್ಲಿ ಸೌಹಾರ್ದ, ಸಹಬಾಳ್ವೆಯ ಅಗತ್ಯವನ್ನು ಮನಗಂಡು ಅದಕ್ಕಾಗಿ ವೇದಿಕೆ ನಿರಂತರವಾಗಿ ಶ್ರಮಿಸುತ್ತಾ ಬಂದಿದೆ. ವೈವಿಧ್ಯವನ್ನು ಸಂಭ್ರಮಿಸಬೇಕು. ಎಲ್ಲರೊಡನೆ ಪ್ರೀತಿ ಹಂಚುವ ಕೈಂಕರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ' ಎಂದು ವೇದಿಕೆಯ ಧ್ಯೇಯೋದ್ದೇಶಗಳ ಬಗ್ಗೆ ಬೆಳಕು ಚೆಲ್ಲಿದರು.

ಖ್ಯಾತ ಸಾಹಿತಿ, ನಿವೃತ್ತ ಶಿಕ್ಷಕಿ ಬಿ.ಎಂ.ರೋಹಿಣಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡಮಿ ಅಧ್ಯಕ್ಷ ಸ್ಟ್ಯಾನಿ ಅಲ್ವಾರಿಸ್, ಬೆಥನಿ ಮುಖ್ಯಸ್ಥೆ ಸಿಸ್ಟರ್ ರೋಸ್ ಮೇರಿ, ಬಾವುಟಗುಡ್ಡ ಝೀನತ್ ಬಕ್ಷ್ ಜುಮಾ ಮಸ್ಜಿದ್‌ನ ಉಪಾಧ್ಯಕ್ಷ ಕೆ.ಅಶ್ರಫ್ ಮಾತನಾಡಿ ಸೌಹಾರ್ದದ ಅಗತ್ಯ ಮತ್ತು ಮಹತ್ವವನ್ನು ಸಾರಿದರು.

ಸಾಮರಸ್ಯ ಮಂಗಳೂರು ಮುಖ್ಯಸ್ಥೆ ಮಂಜುಳಾ ನಾಯಕ್ ವೇದಿಕೆಯಲ್ಲಿದ್ದರು.

ವೇದಿಕೆಯ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ರಹ್ಮಾನ್ ಖಾನ್ ಕುಂಜತ್ತಬೈಲ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

*The Hindu 11-03-2026*



G. Ananth Prabhu speaking in a workshop on 'Lateral Thinking' at St. Aloysius (Deemed to be University), in Mangaluru on Tuesday.
H.S. MANJUNATH

# 'Be careful about what you post on social media accounts'

**The Hindu Bureau**
MANGALURU

Students should be careful about what they write in their social media accounts, as companies now look closely on job aspirants activity on the social media, said motivational speaker and cyber crime expert G. Ananth Prabhu, here on Tuesday.

Mr. Prabhu was speaking in the workshop on "Lateral Thinking" organised by St. Aloysius (Deemed to be University) School of Business and Management, in association with *The Hindu*.

Mr. Prabhu said most of the companies now ask for the social media profile of job aspirants. The companies check aspirant's social media accounts to look at the posts and comments.

**Ananth Prabhu said most of the companies now ask for the social media profile of job aspirants**

"Therefore, you should be careful about your data (on social media accounts)," he said.

During the course, Mr. Prabhu said, the students should learn a foreign language. It was also important to participate in events like hackathon and add new skills. While gaining knowledge, it was important to add new skills to one's profile.

Regular reading of books and newspapers will go a long way in shaping one's career. "You should be good to yourself and not compare yourself with others," he told students.

Udayavani 13-03-2026

# ಅಲೋಶಿಯಸ್: ರಕ್ತದಾನ ಶಿಬಿರ



**ಬಾವುಟಗುಡ್ಡೆ, ಮಾ. 12:** ನಗರದಲ್ಲಿ ರಕ್ತದ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಎನ್‌ಸಿಸಿ ವಿಂಗ್ಸ್ ಮತ್ತು ಯುವ ರೆಡ್ ಕ್ರಾಸ್ ಅಸೋಸಿಯೇಶನ್ ವತಿಯಿಂದ ಜಿಲ್ಲಾ ವೆನ್ಲಾಕ್ ಆಸ್ಪತ್ರೆಯ ಪ್ರಾದೇಶಿಕ ರಕ್ತ ವರ್ಗಾವಣೆ ಕೇಂದ್ರದ ಸಹಯೋಗದಲ್ಲಿ ಬುಧವಾರ ಸಹೋದಯ ಸಭಾಂಗಣದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಯಿತು.

ಶಿಬಿರವನ್ನು ವೆನ್ಲಾಕ್ ರಕ್ತ ನಿಧಿ ವಿಭಾಗದ ಮುಖ್ಯಸ್ಥ ಡಾ| ಶರತ್ ಕುಮಾರ್ ಉದ್ಘಾಟಿಸಿದರು. ಸಹ-ಕುಲಪತಿ ರೆ| ಡಾ| ಮೆಲ್ವಿನ್ ಡಿ'ಕುನ್ಹಾ ಎಸ್.ಜೆ. ಮತ್ತು ಆಡಳಿತಾತ್ಮಕ ಬ್ಲಾಕ್‌ನ ನಿರ್ದೇಶಕ ಡಾ| ಚಾರ್ಲ್ಸ್ ವಿ. ಫುರ್ಟಾಡೊ ಉಪಸ್ಥಿತರಿದ್ದರು. ಎನ್‌ಸಿಸಿ ಮತ್ತು ವೈಆರ್‌ಸಿ ಅಧಿಕಾರಿಗಳು ಮತ್ತು ಸ್ವಯಂಸೇವಕರು ಶಿಬಿರವನ್ನು ಸಂಯೋಜಿಸಿದರು. ವಿದ್ಯಾರ್ಥಿಗಳು, ಸಿಬಂದಿ ಮತ್ತು ಎನ್‌ಸಿಸಿ ಕೆಡೆಟ್‌ಗಳಿಂದ ಒಟ್ಟು 98 ಯೂನಿಟ್ ರಕ್ತ ಸಂಗ್ರಹಿಸಲಾಯಿತು.

Udayavani 14-03-2026

## ಅಲೋಶಿಯಸ್ ವಿವಿಯಲ್ಲಿ ರಾಷ್ಟ್ರೀಯ ಮಾಧ್ಯಮ ವಿಚಾರ ಸಂಕಿರಣ, ಚಲನಚಿತ್ರೋತ್ಸವ

# ಸೃಜನಾತ್ಮಕ ಪ್ರಕ್ರಿಯೆಯನ್ನು ಆನಂದಿಸಿ: ವಿಜಯ್ ರಾಘವೇಂದ್ರ



**ಬಾವುಟಗುಡ್ಡೆ, ಮಾ. 13:** ಸಂತ ಅಲೋಶಿಯಸ್ ಪರಿಗಣಿತ ವಿವಿಯ ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಹ್ಯುಮಾನಿಟೀಸ್‌ನ ಮಾಧ್ಯಮ ಅಧ್ಯಯನ ವಿಭಾಗವು 'ಶೂಟಿಂಗ್ ಸ್ಟಾರ್ಸ್ 2026' ಎಂಬ ರಾಷ್ಟ್ರೀಯ ಮಾಧ್ಯಮ ವಿಚಾರ ಸಂಕಿರಣ ಮತ್ತು ಚಲನಚಿತ್ರೋತ್ಸವವನ್ನು ಕಾಲೇಜಿನಲ್ಲಿ ಗುರುವಾರ ಆಯೋಜಿಸಿತು.

ಚಲನಚಿತ್ರ ನಟ ವಿಜಯ್ ರಾಘವೇಂದ್ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಮೂಲ ಕನ್ನಡ ವಿಷಯಗಳನ್ನು ರಚಿಸುವಂತೆ ಕರೆ ನೀಡಿದರು. ಪ್ಯಾನ್-ಇಂಡಿಯಾ ಸಿನೆಮಾದ ವ್ಯಾಪ್ತಿಯನ್ನು ಪ್ರಶಂಸಿಸಿದ ಅವರು, ಸೃಜನಶೀಲರು ಪ್ರಾಮಾಣಿಕರಾಗಿರಬೇಕು. ಕಠಿನ ಪರಿಶ್ರಮ ಮಾಡಬೇಕು ಮತ್ತು ಸೃಜನಾತ್ಮಕ ಪ್ರಕ್ರಿಯೆಯನ್ನು ಆನಂದಿಸಬೇಕು ಎಂದರು. ಬಿಗ್ ಬಾಸ್ ಪಯಣದ ವೇಳೆ ಬೆಂಬಲಿಸಿದ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಉದ್ಯಮಿ ನಂದಿತಾ ಲಕ್ಷ್ಮಣನ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನದ ಅಡಿಪಾಯವಾಗಿ ಪ್ರಾಮಾಣಿಕತೆಯನ್ನು ಅಳವಡಿಸಿಕೊಳ್ಳಬೇಕು. ನಿಜವಾದ ಆತ್ಮವಿಶ್ವಾಸವು ವ್ಯಕ್ತಿಯ ಮೌಲ್ಯಗಳನ್ನು ಕಾಪಾಡಿಕೊಳ್ಳುವುದರಿಂದ ಬರುತ್ತದೆ. ನೈತಿಕ ಸಂವಹನ, ಪಾರದರ್ಶಕತೆ ಮತ್ತು ಸ್ವತಂತ್ರ ಚಿಂತನೆಯ ಮಹತ್ವವನ್ನು ವಿವರಿಸಿ, ಭವಿಷ್ಯದ ವೃತ್ತಿಪರರು ಸ್ವಕೀಯ ನೈಜ ಕಥೆಗಳನ್ನು ಹೇಳಿ ಪ್ರತಿಯೊಂದು ಸಂದೇಶದಲ್ಲೂ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯನ್ನು ಉಳಿಸಬೇಕು ಎಂದರು.

ಆಡಳಿತ ಬ್ಲಾಕ್ ನಿರ್ದೇಶಕ ಡಾ| ಚಾರ್ಲ್ಸ್ ವಿ. ಫುರ್ಟಾಡೋ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಶೂಟಿಂಗ್ ಸ್ಟಾರ್ಸ್' ಕಾರ್ಯಕ್ರಮದ ಎರಡು ದಶಕಗಳ ಪ್ರಯಾಣವನ್ನು ವಿವರಿಸಿದರು. ವಿದ್ಯಾರ್ಥಿಗಳು ಪ್ರಾಮಾಣಿಕತೆ, ಕರುಣೆ ಮತ್ತು ನೈಜತೆಯನ್ನು ಉಳಿಸಿಕೊಂಡು ತಮ್ಮ ಪ್ರತಿಭೆಯನ್ನು ಬೆಳೆಸಿಕೊಂಡು ಸಮಾಜಕ್ಕೆ ಸಕಾರಾತ್ಮಕ ಕೊಡುಗೆ ನೀಡಬೇಕು ಎಂದು ಅವರು ಸಲಹೆ ನೀಡಿದರು.

ವಿಶ್ವವಿದ್ಯಾಲಯದ ಡಿಪ್ಲೊಮಾ ಇನ್ ಡಿಜಿಟಲ್ ಮಾರ್ಕೆಟಿಂಗ್ ಕೋರ್ಸ್‌ನ ಪೋಸ್ಟರ್ ಅನಾವರಣಗೊಳಿಸಿದರು.

ನಿರೂಪಕರಾದ ದೀಕ್ಷಿತ್ ಕುಂದರ್, ಲಕ್ಷ್ಮೀ ಶೆಟ್ಟಿ ಅಧಿವೇಶನ ನಡೆಸಿದರು. ಸಮಾರೋಪ ಸಮಾರಂಭದಲ್ಲಿ 'ಕಜ್ಜ' ಚಿತ್ರದ ಪ್ರಚಾರ ತಂಡದೊಂದಿಗೆ ಸಂವಾದ ನಡೆಯಿತು.

ಸಿದ್ಧಾರ್ಥ್ ಶೆಟ್ಟಿ ವೆನ್ಸಿಟಾ ಡಯಾಸ್, ಮೋಹನ್, ಚಿರಾಗ್ ಬಜಾಲ್, ಪ್ರಜ್ವಲ್ ಎನ್.ಡಿ. ಮತ್ತು ಭವಿಷ್, ಐಟಿ ಬ್ಲಾಕ್‌ನ ನಿರ್ದೇಶಕಿ ಡಾ| ಲೊವೀನಾ ಲೋಬೊ ಉಪಸ್ಥಿತರಿದ್ದರು.

Udayavani 16-03-2026

# ಸಂತ ಅಲೋಶಿಯಸ್ ವಿವಿ: ರಾಷ್ಟ್ರೀಯ ಸಮ್ಮೇಳನ



**ಬಾವುಟಗುಡ್ಡೆ, ಮಾ. 15:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಜೀವ ರಸಾಯನಶಾಸ್ತ್ರ ವಿಭಾಗವು 'ಜೀವ ರಸಾಯನಶಾಸ್ತ್ರ ಸಂಪರ್ಕ: ಸಂಶೋಧನೆ ಮತ್ತು ನಾವೀನ್ಯತೆಯಲ್ಲಿ ಗಡಿಗಳನ್ನು ಅನ್ವೇಷಿಸುವುದು' ಎಂಬ ರಾಷ್ಟ್ರೀಯ ಸಮ್ಮೇಳನವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಸಮ್ಮೇಳನವನ್ನು ಬೆಂಗಳೂರಿನ ಜವಾಹರ್‌ಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್‌ನ ಪ್ರಾಧ್ಯಾಪಕ ಮತ್ತು ಅಧ್ಯಕ್ಷ ಡಾ| ರವಿ ಮಂಜಿತಾಯ ಅವರು ಉದ್ಘಾಟಿಸಿ ದರು. ಬಳಿಕ ಮಾತನಾಡಿ, ವೈಜ್ಞಾನಿಕ ಚಿಂತನೆ ಬೆಳೆಸುವಲ್ಲಿ ವೈಜ್ಞಾನಿಕ ಸಮ್ಮೇಳನಗಳು ಪ್ರಮುಖ ಪಾತ್ರವಹಿಸುತ್ತವೆ. ವಿಜ್ಞಾನ ವಿದ್ಯಾರ್ಥಿಗಳು ಸಂಶೋಧನೆ ಮತ್ತು ಶೈಕ್ಷಣಿಕ ವೃತ್ತಿಜೀವನವನ್ನು ಅನ್ವೇಷಿಸಲು ಅಮೂಲ್ಯವಾದ ಅವಕಾಶಗಳನ್ನು ಒದಗಿಸುತ್ತವೆ ಎಂದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಅಲೋಶಿಯಸ್ ವಿವಿಯ ಸಹ ಕುಲಪತಿ ವಂ|ಡಾ| ಮೆಲ್ವಿನ್ ಡಿಕುನ್ಹಾ ವಹಿಸಿ, ಮಾತನಾಡಿ, ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧಕರು, ಶಿಕ್ಷಕರು ಪ್ರಸ್ತುತ ವೈಜ್ಞಾನಿಕ ಬೆಳವಣಿಗೆಗಳನ್ನು ಅರ್ಥಮಾಡಿಕೊಳ್ಳಲು, ಶೈಕ್ಷಣಿಕ ಸಹ ಯೋಗಗಳನ್ನು ಬೆಳೆಸಲು ರಾಷ್ಟ್ರೀಯ ಸಮ್ಮೇಳನಗಳು ಹೆಚ್ಚು ಪ್ರಯೋಜನಕಾರಿ ಎಂದರು.

ಎಲ್‌ಸಿಆರ್‌ಐ ನಿರ್ದೇಶಕಿ ಡಾ| ಆಶಾ ಅಬ್ರಹಾಂ ಮತ್ತು ಜೀವವಿಜ್ಞಾನಗಳ ಡೀನ್ ಡಾ| ರೆನಿಟಾ ಡಿ'ಸೋಜಾ, ಸಿಪಿಸಿಆರ್‌ನ ಹಿರಿಯ ವಿಜ್ಞಾನಿ ಡಾ| ರಮೇಶ್ ಎಸ್.ವಿ., ಯೆನೆಪೋಯ ವಿವಿಯ ಸಹಾಯಕ ಪ್ರಾಧ್ಯಾಪಕಿ ಡಾ| ಸೆಬಂತಿ ಗುಪ್ತಾ, ಮೈಸೂರು ವಿಶ್ವವಿದ್ಯಾನಿಲಯದ ಜೀವ ರಾಸಾಯನಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ| ಕ್ಲೀಟಸ್ ಡಿ'ಸೋಜಾ ಇದ್ದರು. ಜೀವ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥೆ ಮತ್ತು ಸಮ್ಮೇಳನದ ಸಂಚಾಲಕಿ ಡಾ| ಲಿನೆಡ್ ಲಸ್ರಾದೊ ಸ್ವಾಗತಿಸಿ, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ| ಅಂಬರೀಷ್ ಸಿ.ಎನ್. ವಂದಿಸಿದರು.

## Digital News Links

1. Mangaluru: School of Engineering at St Aloysius University celebrates National Science Day 2026
   https://www.daijiworld.com/news/newsDisplay?newsID=1307951
2. Mangaluru: St Aloysius University organises Professional Day
   https://www.daijiworld.com/news/newsDisplay?newsID=1308152
3. Mangaluru: 51 species recorded at AIMIT campus during Campus Bird Count 2026
   https://www.daijiworld.com/news/newsDisplay?newsID=1308324
4. Mangaluru: St Aloysius University NCC wings and YRC organise blood donation camp
   https://www.daijiworld.com/news/newsDisplay?newsID=1308807
5. St Aloysius University hosts ‘Shooting Stars 2026’ national media seminar and film festival
   https://www.daijiworld.com/news/newsDisplay?newsID=1308958
6. Mangaluru: St Aloysius University hosts national conference on biochemistry & innovation
   https://www.daijiworld.com/news/newsDisplay?newsID=1308974
7. Mangaluru: St Aloysius University celebrates Women’s Day 2026
   https://www.daijiworld.com/news/newsDisplay?newsID=1308976
8. ST ALOYSIUS (DEEMED TO BE UNIVERSITY) || SHOOTING STARS 2026
   https://www.youtube.com/watch?v=91lB1yQ08HE

<><><>

**We invite you to visit https://digitallibrary.staloysius.edu.in to access the archives of news clippings related to our University. The archive serves as a valuable repository of media coverage, documenting important events, accomplishments, and developments of the University.**